# ಎಂ.ಇ.ಎಸ್.
## ಸಮೂಹ ಶಿಕ್ಷಣ ಸಂಸ್ಥೆ, ಶಿರಸಿ
## ಇ–ತ್ರೈಮಾಸಿಕ ಸುದ್ದಿ ಪತ್ರಿಕೆ
# M.E.S.
## Group Educational Institutions
## e- Quarterly Newsletter




Vol-1(4) | *Aiming Academic Advancement* | Apr-Jun 2024


## ಉದ್ಯೋಗ ಭದ್ರತೆಯ ವಲಯ– ನರ್ಸಿಂಗ್ ಕ್ಷೇತ್ರ



ನರ್ಸಿಂಗ್ ವೃತ್ತಿಯನ್ನು (Nursing profession) ಉದಾತ್ತವಾದ ಹಾಗೂ ಸದ್ಗುಣಶೀಲ ಆಯ್ಕೆ ಎಂದು ಪರಿಗಣಿಸಲಾಗಿದೆ. ನರ್ಸಿಂಗ್ ಎನ್ನುವುದು ಒಂದು ಮೆಡಿಕಲ್ ಓರಿಯೆಂಟೆಡ್ ಕೋರ್ಸ್ ಆಗಿರುತ್ತದೆ. ಹಾಗಾಗಿ ವೈದ್ಯರಿಗೆ ಹೇಗೆ ಬೇಡಿಕೆ ಇದೆಯೋ ಅದೇ ರೀತಿಯಾಗಿ ನರ್ಸಿಂಗ್ ಕೋರ್ಸ್ ಮಾಡಿದವರಿಗೆ ಬಹು ಬೇಡಿಕೆ ಇದೆ. ಕೋವಿಡ್ ನಂತರ ಆರೋಗ್ಯ ಕ್ಷೇತ್ರದಲ್ಲಿ ಬಹಳಷ್ಟು ಬದಲಾವಣೆ ಹಾಗೂ ಪ್ರಗತಿಯಾಗಿದ್ದು ಜಗತ್ತಿನಾದ್ಯಂತ ಶುಶ್ರೂಷಕರ ಹುದ್ದೆ ಭಾರಿ ಬೇಡಿಕೆ ಪಡೆದುಕೊಂಡಿದೆ. ಇತ್ತೀಚಿನ ವರ್ಷಗಳಲ್ಲಿ ಮೆರಿಟ್ ವಿದ್ಯಾರ್ಥಿಗಳು ನರ್ಸಿಂಗ್ ವೃತ್ತಿಯತ್ತ ಒಲವು ತೋರುತ್ತಿದ್ದಾರೆ. ನರ್ಸಿಂಗ್ ವಲಯವು ಸೇವಾ ಮನೋಭಾವದ ಜೊತೆಗೆ ಉದ್ಯೋಗ ಭದ್ರತೆ ಒದಗಿಸುವ ಮೂಲಕ ಮಹತ್ವದ ಪಾತ್ರವಹಿಸಿದೆ. ಜೀವನಶೈಲಿ ಕಾಯಿಲೆಗಳು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಶುಶ್ರೂಷಕರಿಗೆ ಬೇಡಿಕೆ ಪ್ರತಿ ವರ್ಷ ಏರುತ್ತಲೇ ಇದೆ. ವಿಭಕ್ತ ಕುಟುಂಬಗಳಿಂದಾಗಿ ಮನೆಯಲ್ಲಿ ಅನಾರೋಗ್ಯಪೀಡಿತರ ಆರೈಕೆಗೆ ಯಾರೂ ಇಲ್ಲದ ಕಾರಣ ಅವರನ್ನು ನೋಡಿಕೊಳ್ಳಲು ಶುಶ್ರೂಷಕರ ಅಗತ್ಯವಿದೆ.

ಎಲ್ಲಾ ರೀತಿಯ ದೈಹಿಕ ಮತ್ತು ಮಾನಸಿಕ ಅಸ್ವಸ್ಥತೆಗಳಿಂದ ಬಳಲುತ್ತಿರುವ ರೋಗಿಗಳ ಆರೈಕೆಯನ್ನು ನರ್ಸಿಂಗ್ ಒಳಗೊಂಡಿರುತ್ತದೆ. ಶುಶ್ರೂಷಕರು (Nurses) ರೋಗಿಗಳ ಸ್ಥಿತಿಯನ್ನು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಾರೆ ಹಾಗೂ ವೈದ್ಯರು ಶಿಫಾರಸು ಮಾಡಿದ ಔಷಧಿಗಳನ್ನು ನೀಡುತ್ತಾರೆ. ಆಪರೇಷನ್ ಥಿಯೇಟರ್‌ಗಳು ಮತ್ತು ಕ್ಲಿನಿಕಲ್ ಪ್ರಯೋಗಾಲಯಗಳಲ್ಲಿ ವೈದ್ಯಕೀಯ ಉಪಕರಣಗಳನ್ನು ಬಳಸಲು ವೈದ್ಯರಿಗೆ ಸಹಾಯ ಮಾಡುತ್ತಾರೆ.ನರ್ಸಿಂಗ್ ಅನ್ನೋದು ಸಾಮಾನ್ಯ ಕೆಲಸವಲ್ಲ. ರೋಗಿಗಳ ಆರೋಗ್ಯದ ಕಾಳಜಿ ನರ್ಸಗಳ ಕರ್ತವ್ಯವಾಗಿರುತ್ತದೆ. ಇನ್ನು ನರ್ಸ್ ಅಂದಾಕ್ಷಣ ಕೇವಲ ಮಹಿಳೆಯರು ಮಾತ್ರ ಈ ನರ್ಸಿಂಗ್ ಕೋರ್ಸ್ ಮಾಡಬೇಕೆಂದಿಲ್ಲ ಪುರುಷರೂ ಕೂಡ ಈ ಕೋರ್ಸಗಳನ್ನು ಮಾಡಬಹುದು. ಈ ಕ್ಷೇತ್ರ ಉದ್ಯೋಗ ಭದ್ರತೆ ಒದಗಿಸುವುದರಿಂದ ಪುರುಷರೂ ಸಹ ಹೆಚ್ಚಿನ ಪ್ರಮಾಣದಲ್ಲಿ ವೃತ್ತಿ ಸೇರುತ್ತಿದ್ದಾರೆ.

ನರ್ಸಿಂಗ್ ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದಂತೆ ಕರ್ನಾಟಕ ಶುಶ್ರೂಷಕರ ಪರಿಷತ್ತು ಪ್ರಮುಖ ಪಾತ್ರವಹಿಸುತ್ತದೆ. ನರ್ಸಿಂಗ್ ಶಾಲಾ ಕಾಲೇಜು ಆರಂಭಕ್ಕೆ ಅನುಮತಿ ನೀಡುವುದು, ನೋಂದಣಿ ಮಾಡಿಕೊಂಡು ಕಾಲಕಾಲಕ್ಕೆ ನವೀಕರಣ ಮಾಡುವುದು, ನರ್ಸಿಂಗ್ ಮಾಡಿದ ವಿದ್ಯಾರ್ಥಿಗಳಿಗೆ ಪ್ರಮಾಣಪತ್ರ ವಿತರಣೆ ಮಾಡುವುದು ಈ ಪರಿಷತ್ತಿನ ಮುಖ್ಯ ಕರ್ತವ್ಯವಾಗಿದೆ.

**ನರ್ಸಿಂಗ್ ಕೋರ್ಸ್‌ಗಳನ್ನು ಮಾಡಲು ಬೇಕಿರುವ ಅರ್ಹತೆಗಳು:**

ಜಿಎನ್‌ಎಂ(ಡಿಪ್ಲೋಮಾ ಇನ್ ಜನರಲ್ ನರ್ಸಿಂಗ್ ಮತ್ತು ಮಿಡ್ ವೈಫರಿ–3 ವರ್ಷ ಅವಧಿ) ಮತ್ತು ಎಎನ್‌ಎಂ(ಡಿಪ್ಲೋಮಾ ಇನ್ ಆಕ್ಸಿಲ್ಲರಿ ನರ್ಸಿಂಗ್ ಮತ್ತು ಮಿಡ್ ವೈಫರಿ )–2 ವರ್ಷ : ಮಾನ್ಯತೆ ಪಡೆದ ಬೋರ್ಡಿನಿಂದ ಪಿಯುಸಿ(ವಿಜ್ಞಾನ,ಕಾಮರ್ಸ್ ಅಥವಾ ಕಲಾ ವಿಭಾಗ) ಉತ್ತೀರ್ಣರಾಗಿರಬೇಕು. ವಯೋಮಿತಿ– ಕನಿಷ್ಟ 17 ರಿಂದ 35 ವರ್ಷ. ಬಹುಮುಖ್ಯವಾಗಿ ಗಮನಿಸಬೇಕಾದ ವಿಷಯವೆಂದರೆ ಕೆಲವು ಕಾಲೇಜುಗಳಲ್ಲಿ ಪಿಯುಸಿಯನ್ನು ವಾಣಿಜ್ಯ ವಿಭಾಗದಲ್ಲಿ ಓದಿದ ವಿದ್ಯಾರ್ಥಿಗಳಿಗೂ ಈ ಕೋರ್ಸ್ ಮಾಡಲು ಅವಕಾಶವಿರುತ್ತದೆ.

ಬಿ.ಎಸ್.ಸಿ. ನರ್ಸಿಂಗ್ (ಬೇಸಿಕ್) – 4 ವರ್ಷದ ಬ್ಯಾಚುಲರ್ಸ್ ಪದವಿಯ ಕೋರ್ಸ್: ಮಾನ್ಯತೆ ಪಡೆದ ಬೋರ್ಡಿನಿಂದ ಪಿಯುಸಿ ವಿಜ್ಞಾನದಲ್ಲಿ ಭೌತಶಾಸ್ತ್ರ ,ರಸಾಯನಶಾಸ್ತ್ರ, ಜೀವಶಾಸ್ತ್ರ ಮತ್ತು ಇಂಗ್ಲೀಷ್ ಅನ್ನು ಆಯ್ಕೆಮಾಡಿಕೊಂಡು ಉತ್ತೀರ್ಣರಾಗಿರಬೇಕು. ವಯೋಮಿತಿ– ಕನಿಷ್ಟ 17 ವರ್ಷ. ಸಿ ಇ ಟಿ ತೇರ್ಗಡೆ ಅಗತ್ಯ.

*(4 ನೇ ಪುಟಕ್ಕೆ ಮುಂದುವರೆದಿದೆ...)*


## MES Group Offers Education from Kindergarten ( KG) to Post Graduation (PG)

• Pre-Primary (English medium) • Primary(Kannada and English medium) • High school (Kannada and English medium) • 2-Year Pre-University Courses in Arts, Science, and Commerce • 3- Year Degree Courses in Arts (with major History, Journalism, Political Science, Music, English and Sociology), Science(With major Physics, Chemistry, Maths, Botany, Zoology, Computer Science and Biotechnology) • 3- Year Degree Course in Commerce • 2-Year post Graduate Studies in Mathematics(M. Sc) and Commerce (M.Com) • 3- Year Degree Course in Law • 2-Year I.T.I Courses in Electrician, Electronics Mechanic and Fitter • 3-Year Diploma Courses in Civil, Electrical and Electronics( E&E), Electronics and Communication(E &C), Mechanical • 3-Year Diploma Course in General Nursing • Short duration Certificate Courses

## Our Institutions

- MM Arts and Science College *(mmcartsandsciencesirsi.co.in)* : ☎ 08384-295677
- Commerce College *(mesccsirsi.co.in)* : ☎ 08384-236298
- Law College *(meslawcollegesirsi.co.in)* : ☎ 08384-295688
- PU College *(mespucollegesirsi.in)* : ☎ 08384-234881
- Chaitanya PU College *(meschaitanyasirsi.org)* : ☎ 9481099839
- Nursing Institute : ☎ 08384-295984
- RNS Polytechnic *(mesrnsptsirsi.com)* : ☎ 08384-295658
- Private ITI *(mesitisirsi.org)* : ☎ 08384-295842
- Kannada Medium Primary School : ☎ 08384-236900
- Telang High School (formerly Sahyadri ) : ☎ 08384-238899
- English Medium School : ☎ 08384-236060

use this link to see our MES campus : https://youtu.be/kVXp6Y4YzvI

ಪುಟ ಪ್ರಾಯೋಜಕತ್ವ : **ಶ್ರೀಧರ ಹೆಗಡೆ, ಕಡವೆ**

## MES e-Quarterly Newsletter

This is the publication of Modern Education Society (MES), Vidyanagar, Sirsi-581402, Uttara Kannada District, Karnataka.

+917019795455
mesacademics1@gmail.com
www.messirsi.org

Patron : G. M. Hegde, Mulkhand, President

Advisory Board : Bheemanna Naik, M. L. A, Vice President
Nitin Kasarkod, Vice President
Dr. M. G. Hegde,Gadimane. Vice President
S. P. Shetty, Hon. Gen. Secretary
Sudhir Bhat, Treasurer
G. S. Bhat, Upponi , Jt. Secretary
Dr. R. N. Hegde, Bhandimane, Jt. Secretary

Editorial Team: (Staff) Venkatagiri Hegde, Editor
Raghavendra Hegde, Jajigudde
Sharada Bhat

## About MES

Modern Education Society(MES) was founded in 1961 to provide higher education to the aspirants of rural area around Sirsi in Uttara Kannada District of Karnataka. MES is running 16 educational institutions right from Kindergarten (KG) to Post Graduate(PG) studies in different disciplines. Over a lakh students have studied in MES and entered in to different professions to lead a decent life both in India and abroad.

## MES e-Newsletter

This is a medium of communication among stakeholders say management, faculty, staff, students and alumni. Authors are requested to send typed material in English/Kannada addressed to Editor, MES e-Newsletter, MES Administrative office, vidyanagar Sirsi - 581402 by post /e-mail. The matter published need not reflect the views of MES. Authors are solely responsible for articles published under their name. Right to edit and publish the material rests with the editor. Current and back issues are available at www.messirsi.org

## MES Vision and Mission

To provide affordable quality education while equipping students with knowledge and skills in their chosen streams, inculcate values, identify hidden talents, provide opportunities for students to realize their full potential and mould them in to future leaders, entrepreneurs and above all good citizens. To build a community of students, faculty and staff that pursue learning from a diverse global perspectives to make the world ever better.

## ಅಧ್ಯಕ್ಷರ ಲೇಖನಿಯಿಂದ

### ಆರು ದಶಕಗಳ ನಂತರ ಹಳೆಯ ವಿದ್ಯಾರ್ಥಿಗಳ ಹೃದಯಸ್ಪರ್ಶಿ ಮಿಲನ



ಭಾವ ಜೀವಿಯಾದ ಮಾನವನ ಬದುಕಿನ ಸಂತಸದ ಕ್ಷಣಗಳಿಗೆ ಕಾರಣವಾಗುವ ಸಂಗತಿಗಳಲ್ಲಿ ಸ್ನೇಹಿತರ ಒಡನಾಟಕ್ಕೆ ಮಹತ್ವದ ಸ್ಥಾನವಿದೆ. ಯಾವುದೇ ಪ್ರತಿಫಲಾಪಾಕ್ಷೆಯಿಲ್ಲದೇ ಪರಸ್ಪರರು ಹಂಚಿಕೊಳ್ಳುವ ಪ್ರೀತಿ, ವಿಶ್ವಾಸಕ್ಕೆ,ಆತ್ಮೀಯತೆಗೆ ಬೆಲೆ ಕಟ್ಟಲು ಸಾಧ್ಯವೇ ಇಲ್ಲ. ಜಾತಿ,ಮತ,ಪಂಥಗಳ ಬೇಲಿ, ಬಂಧನಗಳಿಲ್ಲದ ಇಂತಹ ನಿರ್ಮಲ ಸ್ನೇಹ ಸಂಬಂಧಗಳು ಸಾಮಾನ್ಯವಾಗಿ ವ್ಯಕ್ತಿಯ ಬಾಲ್ಯ ಮತ್ತು ಯೌವನದ ಪ್ರಾರಂಭದ ವಯಸ್ಸಿನಲ್ಲೇ ಕಾಣಸಿಗುತ್ತವೆ. ಆ ಕಾರಣದಿಂದಾಗಿಯೇ ತಮ್ಮ ಬಾಲ್ಯದ ವಿದ್ಯಾರ್ಥಿ ಜೀವನದ ಆತ್ಮೀಯ ಒಡನಾಡಿಗಳ ಮಧುರ ನೆನಪನ್ನು ಜೀವನದುದ್ದಕ್ಕೂ ವ್ಯಕ್ತಿಗಳು ಕಾಪಿಟ್ಟುಕೊಂಡು ಮೆಲುಕು ಹಾಕುತ್ತಾ ಇರುತ್ತಾರೆ. ಹಲವು ದಶಕಗಳ ಕಾಲ ಅಂತಹ ಒಡನಾಡಿಗಳ ನೇರ ಸಂಪರ್ಕವಿಲ್ಲದೇ ಮುಂದೊಂದು ದಿನ ಅವರೆಲ್ಲ ಒಂದೆಡೆ ಸೇರುವಂತಾದಾಗಿನ ಸಂತಸ,ಸಂಭ್ರಮ ಹೇಗಿದ್ದೀತೆಂಬುದು ಊಹಾತೀತ. ಇಂತಹ ಒಂದು ಸಂಭ್ರಮದ ಸಾಂಗತ್ಯಕ್ಕೆ ವೇದಿಕೆಯಾಗಿದ್ದು ನಮ್ಮ ಎಂ.ಇ.ಎಸ್,

ದಿನಾಂಕ 09/06/2024 ರವಿವಾರ ಎಂ.ಇ.ಎಸ್‌ನ ಆವರಣ ಇಂತಹ ಅಪೂರ್ವ ಸ್ನೇಹಕೂಟಕ್ಕೆ ವೇದಿಕೆಯಾಗಿದ್ದು ನಮ್ಮೆಲ್ಲರಲ್ಲಿ ಹೆಮ್ಮೆ,ಧನ್ಯತಾಭಾವ ಮೂಡಿಸಿದ್ದನ್ನು ಉಲ್ಲೇಖಿಸಲೇಬೇಕು. ಎಂ.ಇ.ಎಸ್ ಕಾಲೇಜು ಪ್ರಾರಂಭವಾದ ಮೂರನೇ ವರ್ಷ ಅಂದರೆ 1964–65 ನೇ ಸಾಲಿನಲ್ಲಿ ಪಿ.ಯು ವಿಜ್ಞಾನ ವಿಭಾಗದಲ್ಲಿ ಅಧ್ಯಯನ ಮಾಡಿದ ವಿದ್ಯಾರ್ಥಿಗಳು ಬರೋಬ್ಬರಿ ಅರವತ್ತು ವರ್ಷಗಳ ನಂತರ ತಮ್ಮ ಸಹಪಾಠಿಗಳೊಂದಿಗೆ 'ವಜ್ರ ಸಂಭ್ರಮ ಸಮ್ಮಿಲನ' ಕಾರ್ಯಕ್ರಮ ಆಚರಿಸಿದ್ದು ಅವಿಸ್ಮರಣೀಯ.

ಅಂದಿನ ಸಮ್ಮಿಲನದಲ್ಲಿ ಪಾಲ್ಗೊಂಡವರೆಲ್ಲರೂ ಕನಿಷ್ಠ 77ರ ಹರೆಯದಾಟಿದವರು. ಕೆಲವರು 80ನ್ನೂ ದಾಟಿ ಮುನ್ನಡೆಯುತ್ತಿರುವವರು. ಅಂದಿನ ಸಹಪಾಠಿಯ ಹೆಸರು ಗೊತ್ತಿಲ್ಲದಿದ್ದರೂ, ಎದುರಿಗೆ ಬಂದರೂ ಗುರುತಿಸಲಾರದಷ್ಟು ಬದಲಾವಣೆಯಾಗಿದ್ದು ಮುಖ ಚಹರೆ ಮತ್ತು ದೇಹದಲ್ಲಿ. ಇದಕ್ಕೆ ಪರಿಹಾರವಾಗಿ ಹೆಸರನ್ನು ಬರೆದಿದ್ದ ಬ್ಯಾಚ್ ಪ್ರತಿಯೊಬ್ಬರ ಎದೆಯ ಮೇಲೆ ಇತ್ತು.

ಜೀವನದ ಪ್ರವಾಹದಲ್ಲಿ ಎಲ್ಲೆಲ್ಲಿಯೋ ತೇಲಿಹೋಗಿ ಬದುಕು ಕಟ್ಟಿಕೊಂಡವರಿಗೆ, ಆರು ದಶಕಗಳ ನಂತರ ತಮ್ಮ ಸಹಪಾಠಿಗಳನ್ನು ಭೆಟ್ಟಿಯಾದಾಗ, ಅವರ ಖುಷಿ, ಸಂತಸವನ್ನು ನೋಡಿದವರಿಗೂ ಸಂತಸ ಹಬ್ಬಿದ್ದು ಸುಳ್ಳಲ್ಲ. ಯೌವನದಲ್ಲಿ ಅನುಭವಿಸಿದ ಅಂದಿನ ತುಂಟಾಟಗಳನ್ನು, ಸರಸ, ವಿರಸಗಳನ್ನು, ಅಂದಿನ ಅಧ್ಯಾಪಕರೊಡೆಗಿನ ಒಡನಾಟ, ಅವರ ಅಧ್ಯಾಪನದ ವೈಖರಿ, ಓರೆಕೋರೆಗಳನ್ನು ಮೆಲುಕು ಹಾಕುತ್ತಾ ಸಂತಸಪಡುತ್ತಿದ್ದವರನ್ನು ಕಂಡಾಗ ಅವರೆಲ್ಲರೂ 80ರ ಬದಲು 18ರ ಹರೆಯದವರಾದಂತೆ ಕಂಡುಬರುತ್ತಿದ್ದರು.

ಇಂಥದೊಂದು ಅಪೂರ್ವ ಸಂದರ್ಭದ ಸೃಷ್ಟಿಗೆ ಕಾರಣಕರ್ತರಾದ ಡಾ.ಆರ್.ಎನ್.ಹೆಗಡೆ. ಭಂಡೀಮನೆಯವರ ಯೋಚನೆ, ಯೋಜನೆ, ಪ್ರೇರೇಪಣೆ, ಸ್ತುತ್ಯಾರ್ಹ, ಅನುಕರಣೀಯ. 1964–65 ನೇ ಸಾಲಿನ ಪಿ.ಯು ಸಾಯಿನ್ಸ ವಿದ್ಯಾರ್ಥಿಗಳ ಹೆಸರುಗಳನ್ನು ಕಾಲೇಜಿನ ಹಳೆಯ ಕಡತಗಳಿಂದ ಪಡೆದು. ಅವರ ಮೊಬೈಲ್ ಸಂಖ್ಯೆಗಳನ್ನು ಕಂಡುಹಿಡಿದು, ಸಂಪರ್ಕಸಿ,ಅವರೆಲ್ಲರ ಒಂದು ವಾಟ್ಸ ಆಪ್ ಗ್ರೂಪ್ ಸೃಷ್ಟಿಸಿದ ಸಾಹಸಗಾಥೆಯ ಶ್ರೇಯಸ್ಸು ಅಂದಿನ ಸಹಪಾಠಿಗಳ ತಂಡದ್ದು. ಅಂದು ತಾವು ಕಲಿಯುವಾಗ ಇದ್ದದ್ದು ಬಾಡಿಗೆ ಕಟ್ಟಡವಾದರೂ,ಇಂದಿನ ಎಂ.ಇ.ಎಸ್ ಕ್ಯಾಂಪಸ್‌ನಲ್ಲಿ ನಿರ್ಮಾಣವಾಗುತ್ತಿರುವ ಚೈತನ್ಯ ಪಿ.ಯು ಕಾಲೇಜಿನ ಕಟ್ಟಡಕ್ಕೆ ಸ್ವ ಪ್ರೇರಣೆಯಿಂದ ಹತ್ತು ಲಕ್ಷ ರೂಪಾಯಿಗಳ ದೇಣಿಗೆ ನೀಡಿದ ಔದಾರ್ಯಕ್ಕಾಗಿ 1964–65 ನೇ ಬ್ಯಾಚಿನ ಪಿ.ಯು ವಿದ್ಯಾರ್ಥಿಗಳ ತಂಡಕ್ಕೆ ನಮ್ಮ ಆಡಳಿತ ಮಂಡಳಿಯ ಹೃತ್ಪೂರ್ವಕ ಧನ್ಯವಾದಗಳು.

ಇಂತಹ ಅಪೂರ್ವ ಕ್ಷಣಗಳಿಗೆ ಸಾಕ್ಷಿಯಾಗುವ ಅವಕಾಶ ಎಂ.ಇ.ಎಸ್‌ನಲ್ಲಿ ಸಾಕಷ್ಟಿವೆ. ನಮ್ಮ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳಿಗೆ ತಮ್ಮ ಸಹಪಾಠಿಗಳೊಂದಿಗೆ ಬೆರೆತು ಸಂತೋಷ ಪಡುವ ಅವಕಾಶವನ್ನು ಮುಕ್ತವಾಗಿ ಕಲ್ಪಿಸುವ ವ್ಯವಸ್ಥೆ ಮಾಡಿಕೊಡಲು ನಮ್ಮ ಆಡಳಿತ ಮಂಡಳಿ ಹೆಮ್ಮೆ ಪಡುತ್ತದೆ. ಸಂತಸ ಬೀರುವ, ಸಂತಸ ಹಂಚುವ, ಸಂತಸ ಪಡುವ ಕ್ಷಣಗಳಿಗೆ ಸಾಕ್ಷಿಯಾಗಲು ಅವಕಾಶ ನೀಡುವಂತೆ ನಮ್ಮ ಸಂಸ್ಥೆಯ ಹಳೆಯ ವಿದ್ಯಾರ್ಥಿಗಳಿಗೆ ಮನ:ಪೂರ್ವಕ ಆಹ್ವಾನವನ್ನು ನೀಡುತ್ತಿದ್ದೇವೆ.

(ಜಿ. ಎಂ. ಹೆಗಡೆ, ಮುಳಖಂಡ)

## ಎಂ. ಇ. ಎಸ್. ನ ದತ್ತಿನಿಧಿಯ ದಾನಿಗಳ ಗಮನಕ್ಕೆ

ಎಂ.ಇ.ಎಸ್. ನಲ್ಲಿ ಸುಮಾರು 350 ದತ್ತಿನಿಧಿಗಳು ಇದ್ದು ಇದರ ಒಟ್ಟೂ ಠೇವಣಿ ಮೊತ್ತ ರೂ. 65 ಲಕ್ಷವಾಗಿದೆ. ಮಕ್ಕಳಲ್ಲಿರುವ ಪ್ರತಿಭೆಯನ್ನು ಪ್ರೋತ್ಸಾಹಿಸುವುದು ಇದರ ಮೂಲ ಉದ್ದೇಶವಾಗಿದೆ. ಸಾರ್ವಜನಿಕರು ರೂ. 500/– ರಿಂದ ರೂ. 4.4 ಲಕ್ಷದವರೆಗೂ ಠೇವು ಇಟ್ಟವರು ಇರುತ್ತಾರೆ. ಕಾಲೇಜು ಪ್ರಾರಂಭವಾಗಿ 1964 ರಲ್ಲಿ ಬಂದ ಮೊದಲ ಬ್ಯಾಚ್‌ನಿಂದ 2023 ರವರೆಗೆ ವಿದ್ಯಾರ್ಥಿಗಳಿಗೆ ಇದೊಂದು ಪ್ರತಿಭಾ ಪುರಸ್ಕಾರವಾಗಿದೆ. ಈ ದತ್ತಿನಿಧಿಯನ್ನು ಬೇರೆ ಯಾವುದೇ ಉದ್ದೇಶಕ್ಕೂ ಉಪಯೋಗಿಸದೇ ಪ್ರತಿವರ್ಷ ಬರುವ ಬಡ್ಡಿಯಿಂದ ಬಹುಮಾನವನ್ನು ದಾನಿಗಳ ಹೆಸರಿನಲ್ಲಿಯೇ ನೀಡುತ್ತಾ ಬರಲಾಗಿದೆ. ಈಗ ಅನೇಕ ದಾನಿಗಳು ಮರಣ ಹೊಂದಿದ್ದಾರೆ.

ಆಗಿನ ಕಾಲದಲ್ಲಿ ಬಡ್ಡಿದರ ಜಾಸ್ತಿ ಇರುತ್ತಿತ್ತು. ಹೀಗಾಗಿ ಕಡಿಮೆ ಠೇವಣಿ ಇದ್ದರೂ ಬಹುಮಾನ ನೀಡಲು ತೊಂದರೆ ಇರಲಿಲ್ಲ. ಆದರೆ ಈಗ ರೂ. 500 ರ ಬಡ್ಡಿ ಯ ಮೊತ್ತ ಅತ್ಯಲ್ಪವಾಗಿದ್ದು ಈ ತರಹದ ಠೇವು ನಿಭಾಯಿಸುವುದು ಮತ್ತು ಬಹುಮಾನ ವಿತರಣೆ ಮಾಡುವುದು ಸಂಸ್ಥೆಯ ಮತ್ತು ಬಹುಮಾನ ಪಡೆಯುವ ಅರ್ಹ ಮಕ್ಕಳಿಗೆ ಈಗಿನ ದಿನಮಾನದಲ್ಲಿ ಸಮಾಧಾನಕರವಾಗಿರುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಎಂ.ಇ.ಎಸ್. ನ ಹಿತೈಷಿಗಳಾದ ಸರ್ವರೂ ಈ ದತ್ತಿನಿಧಿ ಮೊತ್ತಕ್ಕೆ ಹೆಚ್ಚುವರಿ ಠೇವು ಬರುವಂತೆ ಮಾಡಿದಲ್ಲಿ ವಿದ್ಯಾರ್ಥಿಗಳಿಗೆ ಸೂಕ್ತ ಪ್ರೋತ್ಸಾಹ ನೀಡಲು ಅನುಕೂಲ ವಾಗುತ್ತದೆ. ದತ್ತಿನಿಧಿ ಇಟ್ಟವರ ಸಂಬಂಧಿಕರು, ಮಿತ್ರರು, ವಾರಸುದಾರರು ಸ್ವಪ್ರೇರಣೆಯಿಂದ ಮುಂದೆ ಬಂದು ಮೂಲಧನಕ್ಕೆ ಹೆಚ್ಚುವರಿ ಹಣ ಸಂಗ್ರಹವಾಗಲು ಸಹಾಯಮಾಡಬೇಕೆಂದು ಕೋರುತ್ತೇವೆ.

ಅಧ್ಯಕ್ಷರು ಎಂ. ಇ. ಎಸ್.

## KNOW MES FOURTH & SIXTH PRESIDENT



### Dr. V. S. Sonde

Dr.V.S.Sonde was born in a well known Sonde family of Sirsi to the couple late Annapurnabai and Sheshagiri Sonde on 28/12/1930. Vaikuntharao S Sonde had versatile leadership qualities such as modesty, unceasing work, judicious judgment, dedication and perceptiveness. His ancestral home was in Sonda. He matriculated from Marikamba High School, Sirsi and completed PUC Science Education in Belgaum and B.Sc (Agri) from Agriculture College Dharwad. In 1952 when he came to Sirsi as an agricultural graduate, in those days there were ample opportunities to get higher posts in the agriculture department or private sector companies but he chose to stay on his own agriculture farm and business.

His maternal grandfather was late S.N.Keshawain who was closely associated in establishing Sirsi Urban Cooperative Bank and its growth from 1905 to 1964. When Keshawain died in 1964 V.S.Sonde was nominated as Managing Director. Later, he became the Chairman in 1987 and remained in the same capacity for a long time for 32 years till 2019. He contributed for overall development of this bank.

The selfless service by Dr.V.S.Sonde is remembered in the history of MES as he was in the forefront in every development activities of MES since 1961. Then the mercurial personality of V.S.Sonde who had just graduated was attracted by Motensar Thimmappa Hegde who had convened a meeting to establish a college at Sirsi. On one side MES was to be registered with Registrar of Cooperative society and other side MES had to apply for affiliation to Karnataka University to establish a college of Arts and Science. Sonde was made a member of the drafting committee for framing bye laws for MES. He collected the bye laws of various organizations and studied them and framed the rules suiting to our environment. He played an important role in college registration, recognition of Karnataka University and collection of funds to start the college. He was the founder Joint Secretary when MES was established in 1962. Later he became Hon. General Secretary in 1964. He was the President from 1974 to 1976 and from 1978 to 2007 making a record break as MES President for longest period of 31 years. He succeeded in making available exemplary educational facilities to students in different streams such as Arts, Science, Commerce, Law, English medium school and Highschool, Polytechnic and other vocational education in Sirsi for the first time. He also took initiative to bring funds for the MES buildings and endowments from several people hailing from Sirsi but settled in faraway places.

He was the President of Uttara Kannada District Chamber of Industries, Commerce and Agriculture. In that capacity he brought out several burning issues to the notice of higher authorities related to sectors like tourism, roads, highways, railways, ports, forestry, environment, banking sports etc. Under his leadership several seminars and workshops were held in Sirsi to bring out solutions to the local problems. He was an avid reader of journals, magazines and daily newspapers and kept himself update about things happening around the world. He was considered as moving encyclopedia. Whenever he went for a function he used to do homework, study the subject and collects data and spoke to the point. He was involved in promoting literary activities related to Kannada and Konkani languages.

Dr.Sonde was president for the 150 year old Pandit General Library. He was also member of Academic Council of Karnataka University, Dharwad for one term and member of Regents of University of Agricultural Sciences , Bangalore for one term. He was also a life member of Bharat Krishik Samaj. He was the recipient of several awards notably among them Karnataka Government Rajyotsava Prashasti in 1996 and Vidyadhiraj Prashasti of Partagali Matha, Goa.

He was the Chairman of Reception Committee of All India 55th Kannada Sahitya Sammelana, held at Sirsi in 1982, Chairman of Reception Committee of 20th All India Konkani Conference held at Sirsi in 1998, President of Rotary Club, Sirsi, Honorary Secretary of Uttar Kannada District Horticulture Society. He was an active member of several social and cultural organizations.

A remarkable quality of his personality is his sharp memory as he used to recollect exact dates, months, and anecdotes with clarity. After rendering yeomen service to society at large in the fields of social, educational, cultural, religious, he passed away on 11/10/2020 at the age of 90.

*Sharada Bhat, Librarian*
*M E S M.M. Arts and Science College ,Sirsi.*

(1 ನೇ ಪುಟದಿಂದ..)

ಬಿ.ಎಸ್.ಸಿ. ನರ್ಸಿಂಗ್ (ಪೋಸ್ಟ್ ಬೇಸಿಕ್)– 2 ವರ್ಷದ ಬ್ಯಾಚುಲರ್ಸ್ ಪದವಿ ಕೋರ್ಸ್: ಪಿಯುಸಿ (ವಿಜ್ಞಾನ,ಕಾಮರ್ಸ್ ಅಥವಾ ಕಲಾ ವಿಭಾಗ) ಮತ್ತು ಜಿಎನ್‌ಎಂ ಕೋರ್ಸ್‌ನ್ನು ಮಾಡಿರಬೇಕು. ಅಲ್ಲದೇ ಸ್ಟೇಟ್ ನರ್ಸ್ ರಿಜಿಸ್ಟ್ರೇಷನ್ ಕೌನ್ಸಿಲ್ನೊಂದಿಗೆ ರಿಜಿಸ್ಟರ್ ಮಾಡಿಕೊಂಡ ಅಭ್ಯರ್ಥಿಗಳು ಈ ಕೋರ್ಸ್‌ನ್ನು ಮಾಡಬಹುದು.

ಎಂ.ಎಸ್.ಸಿ ನರ್ಸಿಂಗ್ – 2 ವರ್ಷ ಅವಧಿಯ ಸ್ನಾತಕೋತ್ತರ ಪದವಿ ಕೋರ್ಸ್ : ಇಂಡಿಯನ್ ನರ್ಸಿಂಗ್ ಕೌನ್ಸಿಲ್(ಐಎನ್‌ಸಿ)ನಿಂದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ 55% ಅಂಕಗಳೊಂದಿಗೆ ಬಿ.ಎಸ್ಸಿ ನರ್ಸಿಂಗ್ / ಪೋಸ್ಟ್ ಸರ್ಟಿಫಿಕೇಟ್ ಬಿ.ಎಸ್.ಸಿ. / ಪೋಸ್ಟ್ ಬೇಸಿಕ್ ಬಿ.ಎಸ್.ಸಿ. ನರ್ಸಿಂಗ್ ಉತ್ತೀರ್ಣರಾದ ಅಭ್ಯರ್ಥಿಗಳು ಮಾಡಬಹುದು. ಅಲ್ಲದೆಯೇ ಬಿ.ಎಸ್.ಸಿ ನಂತರ 1 ವರ್ಷ ಕೆಲಸದ ಅನುಭವವನ್ನು ಹೊಂದಿರುವುದರ ಜೊತೆಗೆ ಸ್ಟೇಟ್ ನರ್ಸ್ ರಿಜಿಸ್ಟ್ರೇಷನ್ ಕೌನ್ಸಿಲ್ನಲ್ಲಿ ರಿಜಿಸ್ಟರ್ ಮಾಡಿಕೊಂಡಿರುವ ಅಭ್ಯರ್ಥಿಗಳು ಸಹ ಈ ಕೋರ್ಸ್‌ನ್ನು ಮಾಡಬಹುದು.

ಪಿ.ಹೆಚ್‌ಡಿ ಇನ್ ನರ್ಸಿಂಗ್ – 3 ರಿಂದ 5 ವರ್ಷ: ಐಎನ್‌ಸಿಯಿಂದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ 55% ಅಂಕಗಳೊಂದಿಗೆ ಎಂ.ಎಸ್ಸಿ ನರ್ಸಿಂಗ್‌ನಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳು ಈ ಕೋರ್ಸ್‌ನ್ನು ಮಾಡಬಹುದು.

ಎಂ.ಫಿಲ್ ನರ್ಸಿಂಗ್–1 ವರ್ಷ: ಐಎನ್‌ಸಿ (Indian Nursing Council)ಯಿಂದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ 60% ಅಂಕಗಳೊಂದಿಗೆ ಎಂ.ಎಸ್ಸಿ ನರ್ಸಿಂಗ್‌ನಲ್ಲಿ (ಯಾವುದೇ ಸ್ಪೆಷಾಲಿಟಿ) ಉತ್ತೀರ್ಣರಾದ ಅಭ್ಯರ್ಥಿಗಳು ಈ ಕೋರ್ಸ್‌ನ್ನು ಮಾಡಬಹುದು.

ಪಿಜಿ /ಪೋಸ್ಟ್ ಬೇಸಿಕ್ ಸ್ಕಿಲ್ ಬೇಸ್ಡ ಡಿಪ್ಲೋಮ ನರ್ಸಿಂಗ್– 1 ವರ್ಷ: ಐಎನ್‌ಸಿ ಇಂದ ಮಾನ್ಯತೆ ಪಡೆದ ಸಂಸ್ಥೆಯಲ್ಲಿ ಕನಿಷ್ಠ 55% ಅಂಕಗಳೊಂದಿಗೆ ಬಿ.ಎಸ್.ಸಿ. ನರ್ಸಿಂಗ್ / ಪೋಸ್ಟ್ ಬೇಸಿಕ್ ಬಿ.ಎಸ್.ಸಿ. ನರ್ಸಿಂಗ್ / ಜಿಎನ್‌ಎಂ ಉತ್ತೀರ್ಣರಾದ ಅಭ್ಯರ್ಥಿಗಳು ಈ ಕೋರ್ಸಗಳನ್ನು ಮಾಡಬಹುದು. ಇಂತಹ ಪಿಜಿ ಡಿಪ್ಲೋಮ ಮತ್ತು ಸರ್ಟಿಫಿಕೇಟ್ ಕೋರ್ಸಗಳನ್ನು ಮಾಡುವುದರಿಂದ ವಿವಿಧ ಸ್ಪೆಷಾಲಿಟಿಗಳಲ್ಲಿ ಕೆಲಸ ನಿರ್ವಹಿಸಬಹುದು. ಉದಾಹರಣೆಗೆ–ನಿಯೋನಾಟಲ್ ನರ್ಸಿಂಗ್ * ಆರ್ಥೋಪೆಡಿಕ್ ಮತ್ತು ರಿಹ್ಯಾಬಿಲಿಟೇಶನ್ ನರ್ಸಿಂಗ್ * ಆಪರೇಷನ್ ರೂಂ ನರ್ಸಿಂಗ್ * ಕ್ರಿಟಿಕಲ್ ಕೇರ್ ನರ್ಸಿಂಗ್ * ಎಮರ್ಜೆನ್ಸಿ ನರ್ಸಿಂಗ್ * ನ್ಯೂರೋ ಸೈನ್ಸ್ ನರ್ಸಿಂಗ್ * ನರ್ಸಿಂಗ್ ಅಡ್ಮಿನಿಸ್ಟ್ರೇಶನ್ * ಕಾರ್ಡಿಯೋ ಥೋರಾಸಿಕ್ ನರ್ಸಿಂಗ್.

ಉದ್ಯೋಗಾವಕಾಶಗಳು : ಅಭ್ಯರ್ಥಿಗಳು ಯಾವುದೇ ನರ್ಸಿಂಗ್ ಕೋರ್ಸ್ ಮಾಡಿದ ಬಳಿಕ ಸ್ಟೇಟ್ ನರ್ಸ್ ರಿಜಿಸ್ಟ್ರೇಶನ್ ಕೌನ್ಸಿಲ್ ನಲ್ಲಿ ರಿಜಿಸ್ಟರ್ ಮಾಡಿಸಿದಾಗ 'ರಿಜಿಸ್ಟರ್ಡ್ ನರ್ಸ್' ಅಥವಾ 'ರಿಜಿಸ್ಟರ್ಡ್ ಮಿಡ್‌ವೈಫ್' ಎಂದು ನಾಮಫಲಕವನ್ನು ಪಡೆಯುತ್ತಾರೆ, ನಂತರ ಯಾವುದೇ ಸರ್ಕಾರಿ ಅಥವಾ ಖಾಸಗಿ ಆಸ್ಪತ್ರೆ ,ಹೆಲ್ತ್ ಸೆಂಟರ್, ಕಮ್ಯುನಿಟಿ ಹೆಲ್ತ್ ಸೆಂಟರ್,ರಿಹ್ಯಾಬಿಲಿಟೇಶನ್ ಕ್ಲಿನಿಕ್, ಖಾಸಗಿ ಕ್ಲಿನಿಕ್, ಟ್ರೈನಿಂಗ್ ಕಾಲೇಜುಗಳು / ಸಂಸ್ಥೆಗಳಲ್ಲಿ ಕೆಲಸ ಮಾಡಬಹುದು. ನರ್ಸಿಂಗ್ ಮಾಡಿರುವ ಅಭ್ಯರ್ಥಿಗಳಿಗೆ ಭಾರತದಲ್ಲಿ ಮಾತ್ರವಲ್ಲದೇ ವಿದೇಶಗಳಲ್ಲಿಯೂ ಕೂಡ ಭಾರೀ ಉದ್ಯೋಗಾವಕಾಶಗಳಿವೆ. ಯುಎಸ್‌ಎ, ಯುಕೆ, ಗಲ್ಫ್ ದೇಶಗಳು,ಆಸ್ಟ್ರೇಲಿಯಾ, ಕೆನಡಾ ಮತ್ತು ನ್ಯೂಜಿಲ್ಯಾಂಡ್ ದೇಶಗಳಲ್ಲಿ ಭಾರತದಲ್ಲಿ ನರ್ಸಿಂಗ್ ಮಾಡಿರುವ ಅಭ್ಯರ್ಥಿಗಳಿಗೆ ಉತ್ತಮ ಹುದ್ದೆಗಳು ಲಭ್ಯವಿರುತ್ತದೆ.

ರಿಜಿಸ್ಟರ್ಡ್ ನರ್ಸ್‌ಗೆ ಲಭ್ಯವಿರುವ ಜಾಬ್ ಪ್ರೊಫೈಲ್‌ಗಳು : * ಚೀಫ್ ನರ್ಸಿಂಗ್ ಆಫೀಸರ್ * ಅಸಿಸ್ಟೆಂಟ್ ನರ್ಸಿಂಗ್ ಆಫೀಸರ್ * ಕ್ರಿಟಿಕಲ್ ಕೇರ್ ನರ್ಸ್ *ನರ್ಸಿಂಗ್ ಟ್ಯೂಟರ್ * ಪೀಡಿಯಾಟ್ರಿಕ್ ಸರ್ಜರಿ/ನರ್ಸ್ * ನರ್ಸ್ ಮ್ಯಾನೇಜರ್ /ಸೂಪರ್ವೈಸರ್ * ರಿಹ್ಯಾಬಿಲಿಟೇಶನ್ ಸ್ಪೆಷಲಿಸ್ಟ್ * ಲೆಕ್ಚರರ್

2008ರಲ್ಲಿ ಪ್ರಾರಂಭವಾದ ಎಂಇಎಸ್ ಸಂಸ್ಥೆಯ ನರ್ಸಿಂಗ್ ಇನ್ಸ್ಟಿಟ್ಯೂಟ್ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ನರ್ಸಿಂಗ್ ಶಿಕ್ಷಣವನ್ನು ನೀಡುತ್ತಾ ಬಂದಿದೆ. ಮಾನ್ಯತೆ ಪಡೆದ ಬೋರ್ಡಿನಿಂದ ಪಿಯುಸಿಯಲ್ಲಿ (ವಿಜ್ಞಾನ, ಕಾಮರ್ಸ್ ಅಥವಾ ಕಲಾ ವಿಭಾಗ) ಕನಿಷ್ಠ 60% ಅಂಕಗಳಿಸಿ ಉತ್ತೀರ್ಣರಾದ ಕನಿಷ್ಠ 17ರಿಂದ 35 ವರ್ಷ ವಯೋಮಿತಿಯ ವಿದ್ಯಾರ್ಥಿಗಳಿಗೆ 3 ವರ್ಷ ಅವಧಿಯ ಡಿಪ್ಲೋಮ ಇನ್ ಜನರಲ್ ನರ್ಸಿಂಗ್ ಮತ್ತು ಮಿಡ್ ವೈಫರಿ (ಜಿಎನ್‌ಎಂ) ಕೋರ್ಸ ಲಭ್ಯವಿದೆ. ಪ್ರತಿವರ್ಷ 40 ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿದೆ. 'ಮೊದಲು ಬಂದವರಿಗೆ ಮೊದಲ ಆದ್ಯತೆ' ಎಂಬ ನಿಯಮದ ಪ್ರಕಾರ ಪ್ರವೇಶ ನೀಡಲಾಗುತ್ತದೆ. ಅನುಭವಿ ಶಿಕ್ಷಕ ವೃಂದದ ಜೊತೆಗೆ ಅಗತ್ಯವಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಕಾಲೇಜು ಹೊಂದಿದ್ದು, ಪ್ರತಿವರ್ಷ ಉತ್ತಮ ಫಲಿತಾಂಶವನ್ನು ನೀಡುತ್ತಾ ಬಂದಿದೆ. ಪಠ್ಯಕ್ರಮವು ಥೆಯರಿ ಮತ್ತು ಪ್ರಾಕ್ಟಿಕಲ್ ವಿಷಯಗಳನ್ನು ಒಳಗೊಂಡಿದ್ದು 'ಕ್ಲಿನಿಕಲ್ ಪೋಸ್ಟಿಂಗ್' ಮೂಲಕ ವಿದ್ಯಾರ್ಥಿಗಳು ಆಸ್ಪತ್ರೆಯಲ್ಲಿಯೇ ನರ್ಸಿಂಗ್ ತರಬೇತಿ ಪಡೆಯಬಹುದು. ಈವರೆಗೆ ಡಿಜಿಎನ್‌ಎಂ ಕೋರ್ಸ ಮುಗಿಸಿದ 12 ಬ್ಯಾಚ್‌ಗಳ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದು ನಮ್ಮ ರಾಜ್ಯದಲ್ಲಿ ಅಷ್ಟೇ ಅಲ್ಲದೇ ಮಹಾರಾಷ್ಟ್ರ, ಗೋವಾ, ಉತ್ತರಪ್ರದೇಶ, ಬಿಹಾರ,ಓಡಿಸ್ಸಾ, ಆಂದ್ರಪ್ರದೇಶ, ಕೇರಳ ರಾಜ್ಯಗಳಲ್ಲಿ ಶುಶ್ರೂಷಕರಾಗಿ ಹಾಗೂ ಹೆಚ್ಚಿನ ವಿದ್ಯಾಭ್ಯಾಸ ಪಡೆದು ವಿವಿಧ ಉನ್ನತ ಹುದ್ದೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದಾರೆ. ನರ್ಸಿಂಗ್ ಟ್ಯೂಟರ್ ಆಗಿ ಸೇವೆ ಸಲ್ಲಿಸಿ ಅನುಭವ ಪಡೆದವರು ಈಗ ನ್ಯೂಜಿಲ್ಯಾಂಡ್, ದುಬೈ, ಮಸ್ಕತ್,ಕತಾರ್, ಕುವೈತ್ ದೇಶಗಳಲ್ಲಿ ಒಳ್ಳೆಯ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. 12 ವರ್ಷಗಳ ಅವಧಿಯಲ್ಲಿ ಕಾಲೇಜಿನಲ್ಲಿ ಕಲಿತ ಅಂದಾಜು 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ರಾಜ್ಯ/ದೇಶ/ವಿದೇಶದ ಪ್ರತಿಷ್ಠಿತ ಆಸ್ಪತ್ರೆ/ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಪಡೆದಿದ್ದಾರೆ.

ನರ್ಸಿಂಗ್ ಕ್ಷೇತ್ರದಲ್ಲಿ ಈಗ ಉದ್ಯೋಗಪರ್ವ ಆರಂಭಗೊಂಡಿದ್ದು ವಿದ್ಯಾರ್ಥಿಗಳು ನರ್ಸಿಂಗ್ ಶಿಕ್ಷಣವನ್ನು ಪಡೆಯುವುದರ ಮೂಲಕ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವುದು ಸೂಕ್ತ.

ಶ್ರೀಮತಿ ಬೇಬಿ ನಾಯ್ಕ,B.A. B.Sc(Nursing)
ಪ್ರಾಚಾರ್ಯರು, ಎಂ.ಇ.ಎಸ್ ನರ್ಸಿಂಗ್ ಕಾಲೇಜು

**Donations can be made both in kind / Cheque.** The contribution to MES enjoys recognition u/s 80G of Income Tax Act.
Details for remittance: Name: Modern Education Society , Bank: Union Bank of India, Branch Sirsi,
A/c No: 520101231417663, IFSC : UBIN0901164.
(Please send your Name, Address and PAN to M.E.S. E-mail/ Whatsapp to get receipt.)

**Donations Received During this Quarter**

| Sl no | Name | Rs | Beneficiary Institution |
|---|---|---|---|
| 1 | MES M M Arts & Science College 1964-65 PU Science Batch Alumni | 10 lakh | Chaitanya PU College New Building (2 Class rooms) |
| 2 | Dr.T.S.Halemane ,Principal,M M Arts & Science College | 80,000 | Modern Education Society(MES) |

ಪ್ರೀತಿ ಮತ್ತು ಅಭಿಮಾನದಿಂದ ದೇಣಿಗೆ ನೀಡಿ, ಸಂಸ್ಥೆಯ ಪ್ರಗತಿಗೆ ಕೈಜೋಡಿಸಿದ ತಮಗೆಲ್ಲರಿಗೂ ಧನ್ಯವಾದಗಳು. ಅಧ್ಯಕ್ಷರು, ಎಂ.ಇ.ಎಸ್


ಪುಟ ಪ್ರಾಯೋಜಕತ್ವ : ಡಾ|| ರಾಘವೇಂದ್ರ ಕಾಮತ

## M.E.S. History - 4

*(Continued from previous issue)*

# A Reminiscence- Five and Half Decades at MES

**Dr. V. S. Sonde**
Former President, Modern Education Society, Sirsi



M E S Management discussed thoroughly regarding suitable place to construct a building for the College. It submitted a proposal to the Karnataka Government to sanction an area of 110 acres of land in city survey Number 98 and village survey number 123 in Chipgi village between Yellapur Naka and Chipgi cross. Meanwhile an unfortunate event happened. One day our President Shri Motensar Timmappa Hegde while suffering from fever fell from the cot and underwent severe spinal cord fracture. When the Chief Minister Shri Nijalingappa came to know about it, he suggested to admit him to Victoria Hospital Bangalore for treatment. Every day while going back to his residence , the Chief Minister Shri Nijalingappa visited the hospital to know about the health condition of Shri Timmappa Hegde. One day the Chief Minister observed that Shri Hegde was in depression. He asked him about the reason for his depression. Then our President expressed his helplessness that he could not complete the responsibility of the institute for higher education. When the Chief Minister asked about what could be done for it. He told him that the educational institute is becoming destitute without having its own land. Consequently the Chief Minister directed his secretary to inform the Karwar District Commissiner to send a proposal by selecting suitable land in Sirsi to construct a higher education institute for M.E.S. and send it quickly for approval by the government. Hence, the Tahashidar of Sirsi met us and requested us to prepare a proposal seeking sanction of land in Sirsi Town and Chipgi village panchayat with total area of 110 acres and send it to Bangalore through District Commissioner. This is a record in history that in such a quick time the land was sanctioned and handed over to M.E.S . By that time we lost our President who was responsible for the origin of Modern Education Society . We got this land as his blessings.

It was inevitable to start the college from April 1962, but it was necessary to arrange the building and furniture . Subject wise appointment of lecturers was one more challenge. After conducting interviews Shri. Gopalkrishna Nagappa Vaidya and our General Secretary Shri G.V.Dhakappa appointed principal and lectures.

Before the start of the college having a discussion with the Principal regarding furniture and appointment of lectures an advertisement was given and after receiving applications it was arranged to get the furniture. A furniture manufacture industry situated in Industrial estate Hubli supplied teak wood furniture to office and laboratory in a competitive price.

It was a record in the history of Karnataka university that our proud students of M.E.S Arts and Science College got first rank in PUC and also got first rank in both Arts and Science PU examination conducted in March 1963. Overall passing percentage of the college was also very good. Both the students who got first rank in PUC got later first rank in B.Sc and B.A in university examination also. The student who got first rank in B.Sc studied M.Sc and then worked on Ph.d from American university in Electronics. Later he worked as Professor in Indian Institute of Science Bangalore. Another student who got rank in B.A completed his post graduation in Mathematics and worked as a Professor in an American university.

During 1964, we thought of appointing a second lecturer in Mathematics. When we invited a girl student who passed B.A. in first class with mathematics she rejected the offer stating she is too young to control the students. But the interesting thing is soon she took a job in KSRTC.

After the demise of our President Shri Motensar Timmappa Hegde, we requested Shri Ramakrishna Hegde MLA and Finance Minister of Karnataka Government to lead the institute as President and he agreed. Motensar Timmappa Hegde was MLA in Mumbai State Legislative Assembly later he became MLA in Mysore State Assembly also. Since he was instrumental in getting the land and to build the MES institution it was unanimously decided to designate the name of Shri Motensar Timmappa Hegde to MES Arts and Science Collage in order to retain his memory permanently.

In 1963 instead of making compulsory combination of subjects choices were given in both major, minor and basic subjects. Geology in science stream, Kannada, English, Hindi, Samskrit in arts stream were offered. This resulted in enormous expansion of work load in the college. Accordingly the appointment of lecturers and other staff led us to financial crisis. Meanwhile our General Secretary Shri G.V. Dhakappa had retired from his position after serving for four years. At the same time Shri Gajanana Sharma Kallala who was working with me as secretary also retired and started working as a guest lecturer in Hindi. Shri R.G. Deshapande who was working as the manager in Sirsi Urban Bank and serving as the secretary with me also withdrew from his position . So that, I was continued as the chief secretary of M.E.S. Hence I had to lead the MES as General Secretary.

*(Original Kannada article in the souvenir "Jnanasudha" published during MES Habba 2017 by MES. English translation by Shri.K.S.Goudar, Retired Lecturer, MES M M Arts and Science College)*

*(To be continued to next issue)*

# ALUMNI CORNER

## ಕಲಿತ ಶಿಕ್ಷಣ ಸಂಸ್ಥೆಗೆ 10 ಲಕ್ಷ ರೂ.ದೇಣಿಗೆ

### 60 ವರ್ಷಗಳ ಹಿಂದೆ ಕಲಿತ ವಿದ್ಯಾರ್ಥಿಗಳ ಸಮಾಗಮ



1964-65ನೇ ಸಾಲಿನಲ್ಲಿ ಎಂ.ಇ.ಎಸ್ ಎಂ.ಎಂ ಕಲಾ ಮತ್ತು ವಿಜ್ಞಾನ ಕಾಲೇಜಿನಲ್ಲಿ ಪಿ.ಯು ಸಾಯಿನ್ಸ ಓದಿದ ಹಳೇ ವಿದ್ಯಾರ್ಥಿಗಳು ಒಂದೆಡೆ ಸಮಾಗಮಗೊಂಡು 9 ಜೂನ್ 2024ರಂದು ಕಾಲೇಜಿನಲ್ಲೇ ಸ್ನೇಹಕೂಟ ಸಂಘಟಿಸಿದ್ದರು. ತಾವು ಕಲಿತ ಎಂ.ಇ.ಎಸ್ ಸಂಸ್ಥೆಗೆ 10 ಲಕ್ಷ ರೂ ದೇಣಿಗೆ ನೀಡಿದರು.

ಇದೇ ಸಂದರ್ಭದಲ್ಲಿ ಎಂ.ಎಂ ಕಾಲೇಜಿನಲ್ಲಿ ಸೇವೆ ಸಲ್ಲಿಸಿ ನಿವೃತ್ತರಾಗಿ ಅಗಲಿದ ಹಿರಿಯ ಪ್ರಾಚಾರ್ಯರು, ಪ್ರಾಧ್ಯಾಪಕರುಗಳಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಬೆಂಗಳೂರು, ಪುನಾ, ಮುಂಬೈ ಸೇರಿದಂತೆ ವಿವಿಡೆಡೆ ನೆಲೆಸಿರುವ 60ಕ್ಕೂ ಹೆಚ್ಚಿನ ಹಳೆಯ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು. ಎಂ.ಇ.ಎಸ್ ಪ್ರಧಾನ ಕಾರ್ಯದರ್ಶಿ ಎಸ್.ಪಿ.ಶೆಟ್ಟಿ ಅವರು ಮಾತನಾಡಿ, ಶಿಕ್ಷಣದ ಪರಿಸರ ಬದಲಾಗಿದೆ. ಮಾನವೀಯತೆಯಿಂದ ಕಲಿಸಿದ ಶಿಕ್ಷಕರು ನಮ್ಮನ್ನು ಸುಸಂಸ್ಕೃತರನ್ನಾಗಿ ಮಾಡಿದ್ದಾರೆ. ಹಳೇ ವಿದ್ಯಾರ್ಥಿಗಳ ಸ್ನೇಹಕೂಟ ಒಂದು ಉತ್ತಮ ಕಾರ್ಯ ಎಂದರು.ಗುರುವಂದನೆಯಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾದ ಪ್ರೊ.ಎನ್.ಎನ್.ಸಭಾಹಿತ ಅವರ ಅನುಪಸ್ಥಿತಿಯಲ್ಲಿ ವಿ.ಜಿ.ಭಟ್,ಚವತ್ತಿ ಇವರು ಸನ್ಮಾನ ಪತ್ರವನ್ನು



ವಾಚಿಸಿದರು. ಆರ್.ಕೆ.ಹೆಗಡೆ,ಕೋಡ್ಸರ ಅವರ ಬಗ್ಗೆ ಅಭಿನಂದನಾ ನುಡಿಗಳನ್ನು ಆಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಹಿರಿಯ ಪತ್ರಕರ್ತ ಜಯರಾಮ ಹೆಗಡೆ ಅವರು ಮಾತನಾಡಿ, ನನ್ನ ಬದುಕಿನಲ್ಲಿ ಸಾಹಿತಿ, ಪತ್ರಕರ್ತನಾಗಲು ಅವಕಾಶ ಮಾಡಿಕೊಟ್ಟ ವಾತಾವರಣ ಈ ಕಾಲೇಜಿನದು. ಇಲ್ಲಿರುವ ಪ್ರತಿಯೊಂದು ಕ್ಷಣದಲ್ಲಿಯೂ ನನಗೆ ಹೊಸ ಹೊಸ ಕಲಿಕೆಯ ಅನುಭವವಾಗಿದೆ. ಇಂತಹ ಕಾರ್ಯಕ್ರಮವು ಎಲ್ಲಾ ಬ್ಯಾಚ್‌ಗಳ ವಿದ್ಯಾರ್ಥಿಗಳಿಂದ ಆಗಬೇಕು.ತಾನು ಕಲಿತ ಶಿಕ್ಷಣ ಸಂಸ್ಥೆಯ ಅರವತ್ತು ಪ್ರೊಫೆಸರ್ ಕುರಿತು ಚುಟುಕು,ಕವನ ರಚಿಸಿದ್ದೇನೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಎಂ.ಇ.ಎಸ್ ಅಧ್ಯಕ್ಷ ಜಿ.ಎಂ. ಹೆಗಡೆ ಮುಳಖಂಡ ಅವರು ಮಾತನಾಡಿ, ಬದುಕಿನಲ್ಲಿ ಹಿರಿಯರ ಅನುಭವಗಳು ಮುಖ್ಯ. ಇದು ಒಂದು ಮಾದರಿ ಕಾರ್ಯಕ್ರಮ. ಇಂತಹ ಕಾರ್ಯಕ್ರಮಗಳು ಹೆಚ್ಚು ಹೆಚ್ಚು ಆಗಬೇಕು. ಮಾರ್ಗದರ್ಶಿ ಯೋಜನೆಯೊಂದಿಗೆ ರೂಪುಗೊಂಡ ಕಾರ್ಯಕ್ರಮ ಇದಾಗಿದೆ ಎಂದರು.

ಮುಂಬೈನ ಎ.ಆರ್.ಶಾಸ್ತ್ರಿ, ಶಿರಸಿ ಟಿಎಸ್‌ಎಸ್ ಆಸ್ಪತ್ರೆಯ ಡಾ.ಪಿ.ಎಸ್.ಹೆಗಡೆ,ಅಜ್ಜಿಬಳ ಅವರು ಅಗಲಿದ ಪ್ರಾಧ್ಯಾಪಕರಿಗೆ ಮತ್ತು ಸಹಪಾಠಿ ಮಿತ್ರರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ವಜ್ರ ಸಮಿತಿಯ ಉಪಾಧ್ಯಕ್ಷ ಡಾ.ಆರ್.ಎಸ್.ಹೆಗಡೆ,ಭಂಡೀಮನೆ ಅವರು ಪ್ರಾಸ್ತಾವಿಕ ಮಾತನಾಡಿದರು. ವಜ್ರ ಸಮಿತಿಯ ಅಧ್ಯಕ್ಷ ಡಿ.ಜಿ.ಹೆಗಡೆ ಭೈರಿ ಅವರು ಸ್ವಾಗತಿಸಿದರು. ಆರ್.ಎ.ಖಾಜಿಯವರು ಮುಖ್ಯ ಅತಿಥಿಗಳ ಪರಿಚಯ ಮಾಡಿದರು. ವಿ.ಪಿ. ಹೆಗಡೆ ಅವರು ವಂದನಾರ್ಪಣೆ ಮಾಡುತ್ತಾ 60ರಲ್ಲಿ ಅರಳು ಮರಳು ಹೇಳುತ್ತಾರೆ ಆದರೆ 80ರಲ್ಲೂ ಮರಳ ಅರಳು ಎನ್ನುವ ಧ್ಯೇಯ ವಾಕ್ಯದಂತೆ ಕಾರ್ಯಕ್ರಮವನ್ನು ನಡೆಸಿದ್ದೇವೆ ಎನ್ನುತ್ತಾ ಎಲ್ಲರನ್ನೂ ಆತ್ಮೀಯವಾಗಿ ವಂದಿಸಿದರು. ಕಾಲೇಜಿನ ಸಂಗೀತ ವಿಭಾಗದ ಮುಖ್ಯಸ್ಥ ಡಾ.ಕೆ.ಜಿ.ಭಟ್ ನಿರೂಪಿಸಿದರು.ಕಾಲೇಜಿನ ಪ್ರಾಚಾರ್ಯರಾದ ಡಾ.ಟಿ.ಎಸ್.ಹಳೇಮನೆ ವೇದಿಕೆಯಲ್ಲಿ ಉಪಸ್ಥಿತರಿದ್ದರು.

**Register yourself at MES Alumni Data Base by visiting www.messirsi.org**

# NEWS & EVENTS

### ಬಹುವರ್ಷಗಳ ಕನಸು ನನಸು: "ಸಹ್ಯಾದ್ರಿ" ನೂತನ ವಿದ್ಯಾರ್ಥಿ ವಸತಿ ನಿಲಯ ಉದ್ಘಾಟನೆ




4/5/2024 :ವಿದ್ಯಾರ್ಥಿನಿಯರಿಗಾಗಿ ಮೂರು ವಸತಿ ನಿಲಯಗಳನ್ನು ಹೊಂದಿರುವ ಸಂಸ್ಥೆಯು ಈಗ ವಿದ್ಯಾರ್ಥಿಗಳಿಗಾಗಿ ರೂ.60 ಲಕ್ಷ ವೆಚ್ಚದಲ್ಲಿ ನೂತನ ವಸತಿ ನಿಲಯವನ್ನು ನಿರ್ಮಿಸಿದೆ. ದೂರದ ಊರಿನ ವಿದ್ಯಾರ್ಥಿಗಳ ವಸತಿ ಸಮಸ್ಯೆಗೆ ಇದರಿಂದ ಪರಿಹಾರ ದೊರಕಿದಂತಾಗಿದೆ. 60 ರಿಂದ 70 ವಿದ್ಯಾರ್ಥಿಗಳ ವಸತಿಗೆ ಅವಕಾಶ ಕಲ್ಪಿಸಲಾಗಿದ್ದು, ವಸತಿ ನಿಲಯವು ಎಲ್ಲಾ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಹೊಂದಿದೆ. ಮೊದಲು ಬಂದವರಿಗೆ ಪ್ರಥಮ ಆದ್ಯತೆ ಎಂಬ ನಿಯಮದಂತೆ ಎಂ.ಇ.ಎಸ್ ಪದವಿ ಪೂರ್ವ ಹಾಗೂ ಪದವಿ ಮಹಾವಿದ್ಯಾಲಯದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡಲಾಗುತ್ತದೆ

### ಎಂ.ಇ.ಎಸ್ ಶಾಲಾ ವಿದ್ಯಾರ್ಥಿಗಳಿಗೆ "ಸ್ಕೂಲ್ ಬಸ್" ಸೌಲಭ್ಯ




10/6/2024: ಎಂ.ಇ.ಎಸ್‌ನಿಂದ ಹೊಸ ಸ್ಕೂಲ್ ಬಸ್ಸನ್ನು ಖರೀದಿಸಲಾಗಿದೆ. ಶಿರಸಿಯ ನಗರ ಪ್ರದೇಶದಲ್ಲಿ ಬೆಳಗ್ಗೆ ಮತ್ತು ಸಂಜೆ ಬಸ್ಸು ಸಂಚರಿಸುತ್ತಿದ್ದು, ಇದರ ಪ್ರಯೋಜನವನ್ನು ಆಂಗ್ಲ ಮಾಧ್ಯಮ ಪ್ರಾಥಮಿಕ, ಪ್ರೌಢ ಶಾಲೆ ಮತ್ತು ಕನ್ನಡ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಪಡೆಯಬಹುದು.

### ಸ್ಟೈಫಂಡ ವಿತರಣಾ ಕಾರ್ಯಕ್ರಮ



17/5/2024 : ಎಂ.ಇ.ಎಸ್ ಖಾಸಗಿ ಐಟಿಐ ಕಾಲೇಜಿನಲ್ಲಿ 2019-20ನೇ ಶೈಕ್ಷಣಿಕ ವರ್ಷದಿಂದ 'ಕಲಿಕೆಯೊಂದಿಗೆ ಗಳಿಕೆ' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಅನುಷ್ಠಾನಕ್ಕೆ ತರಲಾಗಿದೆ. ಇದರಿಂದ ವಿದ್ಯಾರ್ಥಿಗಳಿಗೆ ಫೀಲ್ಡ್‌ವರ್ಕನ ಅನುಭವದ ಜೊತೆಗೆ ಸ್ಟೈಫಂಡ ಕೂಡ ಸಿಗುತ್ತದೆ. ಫೆಬ್ರುವರಿ,ಮಾರ್ಚ,ಎಪ್ರಿಲ್-2024ರಲ್ಲಿ ಕಾಲೇಜಿನ ಪ್ರೊಡಕ್ಷನ್ ಸೆಂಟರ್‌ನಡಿ 12 ಆಸಕ್ತ ತರಬೇತಾರ್ಥಿಗಳು ಜೆ.ಟಿ.ಓಗಳ ಸೂಕ್ತ ಮಾರ್ಗದರ್ಶನದಲ್ಲಿ ನಿರ್ವಹಿಸಿದ ಎಂ.ಇ.ಎಸ್ ಕಾಮರ್ಸ್ ಕಾಲೇಜಿನ ಸುಮಾರು 400 ಡೆಸ್ಕ್ ಹಾಗೂ ಬೇಂಚ್‌ಗಳ ರಿಪೇರಿ ಕೆಲಸ, ಎಂ.ಇ.ಎಸ್ ಬಾಯ್ಸ್ ಹಾಸ್ಟೆಲ್‌ನ 60 ಸ್ಟಡಿ ಟೇಬಲ್‌ಗಳ ಕೆಲಸಕ್ಕೆ ಒಟ್ಟು 52,700 ರೂ. ಸ್ಟೈಫಂಡನ್ನು ತರಬೇತಾರ್ಥಿಗಳಿಗೆ ಅವರ ಪಾಲಕರ ಸಮ್ಮುಖದಲ್ಲಿ ವಿತರಿಸಲಾಯಿತು. ವಿದ್ಯಾರ್ಥಿಗಳು ತಮ್ಮ ಕೌಶಲ್ಯಾನುಸಾರ 500 ರಿಂದ 10,500 ರೂಪಾಯಿಯವರೆಗೆ ಸ್ಟೈಫಂಡನ್ನು ಪಡೆದದ್ದು ಗಮನಾರ್ಹವಾಗಿತ್ತು.


ಪುಟ ಪ್ರಾಯೋಜಕತ್ವ : ಅಜಯ ಘಾತರಪೇಕರ

BOOK-POST PRINTED MATTER

If Undelivered, please return to :
MES e- Quarterly Newsletter
Modern Education Society (MES),
Vidyanagar, Sirsi- 581402,
Uttara Kannada District, Karnataka
Mob: +91 7019795455
e-mail : mesacademics1@gmail.com
Website: www.messirsi.org

Published by Venkatagiri Hegde,
Faculty MES, on behalf of MES and
Printed at Chetana Co-op. Printing Press, Sirsi
☏ :08384-414526

To

# ಎಂ.ಇ.ಎಸ್. ಚಿತ್ರವಾರ್ತೆ

## ಎಂ.ಇ.ಎಸ್ ಎಂ.ಎಂ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯ



15/4/2024 : ಉತ್ತರ ಕನ್ನಡ ಜಿಲ್ಲಾ ಅನುದಾನಿತ ಶಿಕ್ಷಣ ಸಂಸ್ಥೆಗಳ ಫೆಡರೇಶನ್ನಿನ ಸಭೆ

17/5/2024: "ಹೇಳದೇ ಉಳಿದ ಕಥೆಗಳು" ಕಾರ್ಯಕ್ರಮ: ವಿಶ್ವಶಾಂತಿ ಸೇವಾ ಟ್ರಸ್ಟನಿಂದ



## ಎಂ.ಇ.ಎಸ್ ಕಾನೂನು ಮಹಾವಿದ್ಯಾಲಯ




20/5/24: ಕಾಲೇಜಿನ ರಾಷ್ಟ್ರೀಯ ಸೇವಾ ಯೋಜನೆ ಘಟಕದಡಿಯಲ್ಲಿ ಸೇವಾ ಶಿಬಿರ ಉದ್ಘಾಟನೆ– ಸಂಪಖಂಡದ ಶ್ರೀ ಗಜಾನನ ಪ್ರೌಢಶಾಲೆ

## ಎಂ.ಇ.ಎಸ್ ವಾಣಿಜ್ಯ ಮಹಾವಿದ್ಯಾಲಯ



3/4/2024: ಎನ್ಎಸ್ಎಸ್ ವಿಶೇಷ ಸೇವಾ ಶಿಬಿರ:ಶ್ರೀ ವೆಂಕಟರಮಣ ದೇವಸ್ಥಾನ,ಮಂಜುಗುಣಿ




31/5/2024: ತಂಬಾಕು ಸೇವನೆ ವಿರೋಧಿ ದಿನ : ಜಾಗೃತಿ ಕಾರ್ಯಕ್ರಮ

## ಎಂ.ಇ.ಎಸ್ ಕನ್ನಡ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ





31/5/2024: ಶಾಲಾ ಪ್ರಾರಂಭೋತ್ಸವ

## ಎಂ.ಇ.ಎಸ್ ಐ ಟಿ ಐ ಕಾಲೇಜು



30/5/2024: ವಾರ್ಷಿಕ ಸ್ನೇಹ ಸಮ್ಮೇಳನ ಹಾಗೂ ದತ್ತಿನಿಧಿ ಬಹುಮಾನ ವಿತರಣಾ ಸಮಾರಂಭ

## 5/6/2024 : ವಿಶ್ವ ಪರಿಸರ ದಿನಾಚರಣೆ



ಆರ್.ಎನ್.ಶೆಟ್ಟಿ ಪಾಲಿಟೆಕ್ನಿಕ್

ಕನ್ನಡ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆ







ಕಾನೂನು ಮಹಾವಿದ್ಯಾಲಯ

ತೆಲಂಗ ಪ್ರೌಢಶಾಲೆ



ಆಂಗ್ಲ ಮಾಧ್ಯಮ ಶಾಲೆ



## RETIREMENT

**ನಮ್ಮ ಸಂಸ್ಥೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ ಇವರ ನಿವೃತ್ತ ಜೀವನ ಸುಖಕರವಾಗಿರಲಿ ಎಂದು ಹಾರೈಸುತ್ತೇವೆ.**



ಶ್ರೀ ವಿಷ್ಣುದಾಸ ಪ್ರಭು, ಉಪನ್ಯಾಸಕರು,ಸಿವಿಲ್ ವಿಭಾಗ, ಆರ್.ಎನ್.ಶೆಟ್ಟಿ ಪಾಲಿಟೆಕ್ನಿಕ್.
40 ವರ್ಷಗಳ ಸುದೀರ್ಘ ಕಾಲ ಸೇವೆ ಸಲ್ಲಿಸಿ, ದಿನಾಂಕ:30/04/2024 ರಂದು ಸೇವಾ ನಿವೃತ್ತಿ ಹೊಂದಿದ್ದಾರೆ.

ಡಾ.ಪಿರಪ್ಪ ತುಕಾರಾಮ ಕದಮ, ಗ್ರಂಥಪಾಲಕರು, ವಾಣಿಜ್ಯ ಮಹಾವಿದ್ಯಾಲಯ. 38 ವರ್ಷಗಳ ಸುದೀರ್ಘ ಕಾಲ ಸೇವೆ ಸಲ್ಲಿಸಿ, ದಿನಾಂಕ:30/06/2024ರಂದು ಸೇವಾ ನಿವೃತ್ತಿ ಹೊಂದಿದ್ದಾರೆ.





ಪುಟ ಪ್ರಾಯೋಜಕತ್ವ : ಜಿ. ಎಸ್. ಹೆಗಡೆ, ಸಣ್ಮನೆ